for Excise Commissioner

ಕರ್ನಾಟಕ ವಿಧಾನ ಸಭೆ
13ನೇ ವಿಧಾನಸಭೆ
3ನೇ ಅಧಿವೇಶನ

589 ಶ್ರೀ ಸಿದ್ದು ಸವದಿ (ತೆರದಾಳ್)
ಮಾನ್ಯ ಲೋಕೋಪಯೋಗಿ ಸಚಿವರು

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯದ ರಸ್ತೆ ಅಭಿವೃದ್ಧಿ ನಿಗಮ (ಕೆಶಿಪ್) ದಿಂದ ಅಭಿವೃದ್ಧಿಗೆ ಆಯ್ಕೆ ಮಾಡಿದ ರಸ್ತೆಗಳು ಯಾವುವು; ಈಗ ಅವು ಯಾವ ಹಂತದಲ್ಲಿ ಇವೆ;

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2ರಲ್ಲಿ ಬಾಗಲಕೋಟೆ ಜಿಲ್ಲೆ ವ್ಯಾಪ್ತಿಯಲ್ಲಿ 191.30 ಕಿ.ಮೀ ರಾಜ್ಯ ಹೆದ್ದಾರಿಯನ್ನು ಮೇಲ್ದರ್ಜೆಗೇರಿಸಲು ಯೋಜಿಸಲಾಗಿದೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ರಸ್ತೆಯ ವಿವರ	ಜಿಲ್ಲೆಯಲ್ಲಿ ಹಾದು ಹೋಗುವ ರಸ್ತೆಯ ಉದ್ದ ಕಿ.ಮೀಗಳಲ್ಲಿ
1.	ಮುಧೋಳ-ಮಹಾಲಿಂಗಪೂರ-ಕಬ್ಬೂರು	25.10
2.	ರಾಮದುರ್ಗ-ಬಾದಾಮಿ-ಪಟ್ಟದಕಲ್ಲು-ಕಮ್ಮಟ್ಟಗಿ-ಕೂಡಲಸಂಗಮ	117.70
3.	ಹುನಗುಂದ-ಮುದ್ದೇಬಿಹಾಳ್	17.90
4.	ಜಮಖಂಡಿ-ಅಸಂಗಿ-ತೆರದಾಳ್	30.60
	ಒಟ್ಟು	191.30

ಮುಧೋಳ-ಮಹಾಲಿಂಗಪೂರ-ಕಬ್ಬೂರು ರಸ್ತೆ ಅಭಿವೃದ್ಧಿಯನ್ನು ವಿಶ್ವಬ್ಯಾಂಕ್ ನೆರವಿನ ಯೋಜನೆಯ ಮೊದಲ ಹಂತದಲ್ಲಿ ಕೈಗೊಳ್ಳಲು ಯೋಜಿಸಲಾಗಿದ್ದು, ಗುತ್ತಿಗೆಗಳ ದಸ್ತಾವೇಜುಗಳನ್ನು ಸಿದ್ಧಪಡಿಸಲಾಗುತ್ತಿದ್ದು, ವಿಶ್ವಬ್ಯಾಂಕ್ ಅನುಮೋದನೆ ದೊರೆತ ನಂತರ ಬಿಡ್‌ಗಳನ್ನು ಆಹ್ವಾನಿಸಲಾಗುವುದು.

ಆ) ಸದರೀ ಯೋಜನೆಯಲ್ಲಿ ಅಭಿವೃದ್ಧಿಪಡಿಸಲಿಚ್ಚಿಸಿರುವ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಆ ರಸ್ತೆಗಳನ್ನು ದುರಸ್ತಿ ಮಾಡಲಾಗುವುದೇ; ಎಂದಿನಿಂದ ದುರಸ್ತಿ ಮಾಡಲಾಗುವುದು?

1. ಮುಧೋಳ-ಮಹಾಲಿಂಗಪೂರ-ಕಬ್ಬೂರು ರಸ್ತೆ ರಾಜ್ಯ ಹೆದ್ದಾರಿ 18ರ ಭಾಗವಾಗಿದ್ದು ಈ ಹೆದ್ದಾರಿಯನ್ನು ಕಳೆದ 3 ವರ್ಷಗಳಿಂದ ಕರ್ನಾಟಕ ರಸ್ತೆ

ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕೈಗೊಳ್ಳಲಾಗಿದ್ದು ಅತ್ಯಂತ ಹಾಳಾದ ಭಾಗವನ್ನು 3054 ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಯೋಜನೆ ಅಡಿಯಲ್ಲಿ 2008–09ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲಾಗಿದೆ.

2. ರಾಮದುರ್ಗ –ಬಾದಾಮಿ – ಪಟ್ಟದಕಲ್ಲು– ಕಮ್ಮಟ್ಟಗಿ– ಕೂಡಲಸಂಗಮ ಸದರಿ ರಸ್ತೆಯು ಪಟ್ಟದಕಲ್ಲುವರೆಗೆ ರಾ.ಹೆ–14ರ ಭಾಗವಾಗಿದ್ದು, ಸದರಿ ರಸ್ತೆಯನ್ನು ಕಳೆದ 3 ವರ್ಷ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕೈಗೊಳ್ಳಲಾಗಿದೆ. ಪಟ್ಟದಕಲ್ಲಿನಿಂದ ಕಮ್ಮಟ್ಟಗಿಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಸದರಿ ರಸ್ತೆಯನ್ನು 2008–09ನೇ ಸಾಲಿನ 3054–12ನೇ ಹಣಕಾಸಿನ ಅಡಿ ನಿರ್ವಹಣೆ ಕೈಗೊಳ್ಳಲಾಗಿದೆ. ಕಮ್ಮಟ್ಟಗಿಯಿಂದ ಕೂಡಲಸಂಗಮ ರಸ್ತೆಯು ರಾ.ಹೆ–44ರ ಭಾಗವಾಗಿದ್ದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ವಹಣೆ ಕೈಗೊಂಡು ಪೂರ್ತಿ ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ.

3. ಹುನಗುಂದ ಮುದ್ದೆಬಿಹಾಳ ರಸ್ತೆ – ಸದರಿ ರಸ್ತೆಯು ಈ ಹಿಂದೆ ಕೃಷ್ಣ ಬಾಗ್ಯ ಜಲ ನಿಗಮ ನಿಯಮಿತ ಇಲಾಖೆಯ ವಶದಲ್ಲಿದ್ದು, ಜೂನ್–2009ರಲ್ಲಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದ್ದು, ಸದರಿ ರಸ್ತೆಯು ಬಹಳ ದುಸ್ಥಿತಿಯಲ್ಲಿದ್ದು ಈ ರಸ್ತೆಯ ಅಭಿವೃದ್ಧಿಗೆ 600.00 ಲಕ್ಷ ರೂ.ಗಳಿಗೆ ಈಗಾಗಲೇ ಟೆಂಡರ್ ಕರೆದಿದ್ದು ಗುತ್ತಿಗೆ ಪ್ರಕ್ರಿಯೆ ಜಾರಿಯಲ್ಲಿದೆ.

4. ಜಮಖಂಡಿ–ಅಸಂಗಿ–ತೆರದಾಳ್ ರಸ್ತೆ ರಾ.ಹೆ–53ರ ಭಾಗವಾಗಿದ್ದು ಈ ರಸ್ತೆಯ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲಾಗಿದೆ ಹಾಗೂ 2008–09ನೇ ಸಾಲಿನ 3054 ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ವಹಣೆ ಕೈಗೊಂಡು ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ.

ಸಂಖ್ಯೆ.ಲೋಇ/99/ಎಲ್‌ಎಕ್ಯೂ/ಇಎಪಿ/2009

<u>ಕರ್ನಾಟಕ ವಿಧಾನ ಸಭೆ</u>

590 ಶ್ರೀ ಸಿದ್ದು ಸವದಿ (ತೆರದಾಳ್)

ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ) ದಿನಾಂಕ:1–04–2006 ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕು ಮೀನುಗಾರರಿಗೆ ಒದಗಿಸಿದ ಸೌಲಭ್ಯಗಳಾವುವು;

ದಿನಾಂಕ:1–4–2006 ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕು ಮೀನುಗಾರರಿಗೆ ಒದಗಿಸಿದ ಸೌಲಭ್ಯಗಳ ವಿವರ <u>ಅನುಬಂಧ–1</u> ರಲ್ಲಿ ನೀಡಲಾಗಿದೆ.

ಆ) 1–04–2006 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಮೀನುಗಾರರಿಗೆ ಒದಗಿಸಿದ ಮತ್ಸ್ಯಾಶ್ರಯಗಳೆಷ್ಟು (ಕ್ಷೇತ್ರವಾರು ಮಾಹಿತಿ ನೀಡುವುದು);